# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE
REACHING NATIONS

**India's National Spiritual Newspaper**

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXVI | YEAR OF OUR LORD JESUS CHRIST, 2024 OCTOBER | No.09

## ಪರಿಶುದ್ಧ ಸತ್ಯವೇದ

ಈ ಕೆಳಗಿನ ವಚನಗಳನ್ನು ದಯಮಾಡಿ ಕಂಠ ಪಾಠ ಮಾಡಿರಿ. ಜ್ಞಾನೋಕ್ತಿಗಳು 13:1-10

1. ಜ್ಞಾನಿಯಾದ ಮಗನು ತಂದೆಯ ಶಿಕ್ಷೆಯನ್ನು ಕೇಳುವನು; ಧರ್ಮನಿಂದಕನೋ ಗದರಿಕೆಯನ್ನು ಕೇಳನು.
2. ಬಾಯ ಫಲವಾಗಿ ಮನುಷ್ಯನು ಸುಖವನ್ನನುಭವಿಸುವನು; ಬಲಾತ್ಕಾರವೇ ದ್ರೋಹಿಗಳ ಕೋರಿಕೆ.
3. ಬಾಯನ್ನು ಕಾಯುವವನು ಜೀವವನ್ನು ಕಾಯುತ್ತಾನೆ; ತುಟಿಗಳನ್ನು ತೆರೆದು ಬಿಡುವವನು ನಾಶವಾಗುವನು.
4. ಸೋಮಾರಿಯ ಆಶೆಯು ವ್ಯರ್ಥ; ಉದ್ಯೋಗಿಯ ಆತ್ಮಕ್ಕೆ ಪುಷ್ಟಿ.
5. ಶಿಷ್ಟನು ಮೋಸಕ್ಕೆ ಅಸಹ್ಯಪಟ್ಟು ಮಾಡಲೊಲ್ಲನು; ದುಷ್ಟನ ನಡತೆಯು ಹೇಸಿಕೆಗೂ ನಾಚಿಕೆಗೂ ಆಸ್ಪದ.
6. ಧರ್ಮವು ನಿರ್ದೋಷಿಯನ್ನು ಕಾಯುವುದು; ಅಧರ್ಮವು ದೋಷಿಯನ್ನು ಕೆಡವಿ ಬಿಡುವುದು.
7. ಒಬ್ಬನು ಧರ್ಮವನ್ನು ಸಂಗ್ರಹಿಸಿದರೂ ಏನು ಇಲ್ಲದ ದರಿದ್ರನೇ; ಮತ್ತೊಬ್ಬನು ಧನವನ್ನೆಲ್ಲಾ ವ್ಯಯ ಮಾಡಿ ಬಡವನಾದರೂ ಬಹು ಐಶ್ವರ್ಯವಂತನೇ.
8. ಧನವಂತನ ಪ್ರಾಣರಕ್ಷಣೆಗೆ ಅವನ ಧನವೇ ಈಡು; ಬಡವನಿಗೆ ಯಾವ ಬೆದರಿಕೆಯೂ ಇಲ್ಲ.
9. ಶಿಷ್ಟರ ಬೆಳಕು ಬೆಳಗುವುದು; ದುಷ್ಟರ ದೀಪವು ಆರುವುದು.
10. ಹೆಮ್ಮೆಯ ಫಲವು ಕಲಹವೇ; ಬುದ್ಧಿವಾದಕ್ಕೆ ಕಿವಿಗೊಡುವವರು ಜ್ಞಾನಿ.

### ನಮ್ಮ ಆಲೋಚನೆಗಳು ಪ್ರಾಮುಖ್ಯವಾಗಿವೆ : ಪ್ರತಿಬಿಂಬಗಳು

# ದಾವಿದನಿಂದ

## Our Thoughts Matter: Reflections from David

*(ಗೌರವ ಮುಖ್ಯಸಂಪಾದಕರು. ಘನ ಆ್ಯಂಜಲಿನ್ ಸೆಲ್ವಕುಮಾರಿ)*



ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ಸರಿಸಾಟಿಯಿಲ್ಲದ ನಾಮದಲ್ಲಿ ನಿಮಗೆ ಶುಭಾಶಯಗಳು!

ನಮ್ಮ ಪತ್ರಿಕೆಯ ಮೂಲಕ ಪ್ರತಿತಿಂಗಳು ಆತನ **ಕರೆಯ ಪ್ರತಿಧ್ವನಿ**ಯ ವಿಸ್ತರಿಸಲ್ಪಟ್ಟ ಕುಟುಂಬದೊಂದಿಗೆ ಸಂಪರ್ಕ ಸಾಧಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಕರ್ತನು ನಮ್ಮನ್ನು ನಿರಂತರವಾಗಿ ನಡೆಸಿ ಮತ್ತು ನಮ್ಮ ಜೀವಿತದಲ್ಲಿ ಆತನ ಉದ್ದೇಶಗಳು ನೆರವೇರುವುದಕ್ಕಾಗಿ ನಡೆಸಲಿ ಮತ್ತು ಆತನ ಬರುವಿಕೆಗಾಗಿ ನಮ್ಮನ್ನು ಸಿದ್ಧಗೊಳಿಸಲಿ.

ಗೌರವಾನ್ವಿತ ಬೆಂಜಮಿನ್ ಫ್ರಾಂಕ್ಲಿನ್ ಯುನೈಟೆಡ್ ಸ್ಟೇಟ್ಸ್ ಸ್ಥಾಪಕ ಪಿತಾಮಹ ಅವರು ಒಂದು ಸಾರಿ ಹೀಗೆ ಹೇಳಿದರು-ನೀವು ಯೋಜಿಸಲು ವಿಫಲವಾದರೆ ನೀವು ವಿಫಲಗೊಳ್ಳಲು ಯೋಜಿಸುತ್ತಿದ್ದೀರಿ. ಇವು ಆಳವಾದ ಪ್ರಭಾವದ ಮಾತುಗಳು ಆಗಿವೆ. ಯೋಜನೆಯು ನಮ್ಮ ಜೀವಿತದಲ್ಲಿ ನಿರ್ಣಾಯಕವಾದ ಅಂಶವಾಗಿದೆ.

*(3ನೇ ಪುಟಕ್ಕೆ)*

**Echo of His Call**



***Christian YouTube Channel!***

**An opportunity to pray with Pr. S. Sam Selva Raj!**

**Message & Prayer in 5 minutes!!**

**English, Hindi, Tamil & Telugu**


**Every day – From 2.00 A.M.**

**Tamil Sunday Service – 8.30 A.M.**

*** Please Subscribe and Share ***

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*



ECHO OF HIS CALL 1969-2019
REACHING NATIONS



## ಯೆಹೋವನೇ ನಿಮಗಾಗಿ ಯುದ್ಧ ಮಾಡುವನು; ನೀವಂತೂ ಸುಮ್ಮನೇ ಇರಿ (ವಿಮೋಚನ ಕಾಂಡ 14:14)

**ನಿಮ್ಮ ಪ್ರೀತಿಯ ಸಹೋದರನಿಂದ,**

ಪ್ರೀತಿಯ ಸ್ನೇಹಿತರೇ,

ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ಸರಿಸಾಟಿಯಿಲ್ಲದ ನಾಮದಲ್ಲಿ ನಿಮಗೆ ನಾವು ಶುಭಾಶಯಗಳನ್ನು ತಿಳಿಸುತ್ತೇವೆ! ಪಾಸ್ಟರ್ ಎಸ್ ಸ್ಯಾಮ್ ಸೆಲ್ವರಾಜ್‌ರವರ ಆತ್ಮಚರಿತ್ರೆಯ ಪುಸ್ತಕವನ್ನು ಸಿದ್ಧತೆ ಮಾಡುವುದರಲ್ಲಿ ನಾವು ನಿರತವಾಗಿದ್ದೇವೆ. ಕಳೆದ 55 ವರ್ಷಗಳಲ್ಲಿ ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳ ಮೂಲಕವಾಗಿ ಆಶೀರ್ವಾದವನ್ನು ಹೊಂದಿದ್ದರೆ, ಪಾಸ್ಟರ್ ಸ್ಯಾಮ ಸೆಲ್ವರಾಜ್ ಮತ್ತು ಅವರ ಸೇವೆಯ ಮೂಲಕವಾಗಿ ಕರ್ತನಾದ ಯೇಸುಕ್ರಿಸ್ತನನ್ನು ಮುಖಮುಖಿಯಾಗಿ ಸಂಧಿಸಿದ್ದರೆ ಈ ಆತ್ಮಚರಿತ್ರೆಯಲ್ಲಿ ನಿಮ್ಮ ಅನುಭವವನ್ನು ಹಂಚಿಕೊಳ್ಳುವುದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ದೇವರು ನಿಮ್ಮನ್ನು ಆಶೀರ್ವದಿಸಲಿ!

ನಾವು 2024 ನ್ನು ಮುಗಿಸುವ ಹಂತದಲ್ಲಿ ಇದ್ದೇವೆ. ದೇವರು ನಮಗೆ ನೀಡಿದ ಅನಿರ್ವಚನೀಯ ಮತ್ತು ವಿವರಿಸಲಾಗದ ಸಮಯೋಚಿತ ಸಹಾಯಕ್ಕಾಗಿ ದೇವರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲು ನಾವು ನಿಮ್ಮೊಂದಿಗೆ ಕೈಜೋಡಿಸುತ್ತೇವೆ. ಅಸಂಖ್ಯವಾದ ಸನ್ನಿವೇಶಗಳಲ್ಲಿ, ನಮ್ಮ ಸೇವೆಗೆ ನೀವು ಸಹಾಯ ಮಾಡುವುದಕ್ಕೆ ಆತನು ಉಪಯೋಗಿಸಿಕೊಂಡನು. ಅದೇ ದೇವರು, ಯೇಸುಕ್ರಿಸ್ತನು, ಈ ಹೊತ್ತು ಆತನು ನಮಗೆ ಲಭ್ಯವಾಗಿದ್ದಾನೆ. ಆದ್ದರಿಂದ ಆತನಲ್ಲಿ ಭರವಸೆವಿಡಿರಿ ಮತ್ತು ನಿಮ್ಮ ಜೀವನದಲ್ಲಿ ಅದ್ಭುತ ಕಾರ್ಯಕ್ಕಾಗಿ ಆತನ ಮೇಲೆ ಅವಲಂಬನೆಯಾಗಿರಿ.

ಈ ಪತ್ರಿಕೆಯ ಮೂಲಕ, ನಮ್ಮ ಸೇವೆಯ ಈ ಕೆಳಗಿನ ಕ್ಷೇತ್ರಗಳಿಗಾಗಿ ನಾವು ನಿಮ್ಮ ಶ್ರದ್ಧಾಪೂರ್ವಕ ಪ್ರಾರ್ಥನೆಗಳನ್ನು ಶ್ರದ್ಧೆಯಿಂದ ಕೇಳುತ್ತೇವೆ :

- ಪ್ರತಿ ತಿಂಗಳು 16 ಭಾಷೆಗಳ ಆತನ **ಕರೆಯ ಪ್ರತಿಧ್ವನಿ**ಯ ಪತ್ರಿಕೆಯನ್ನು ಪ್ರಕಟಿಸುವುದಕ್ಕೆ ಅಂದಾಜು 75 ವ್ಯಕ್ತಿಗಳು ಒಳಗೊಂಡಿರುತ್ತಾರೆ. ಅವರ ಜವಾಬ್ದಾರಿಯು ಸಂದೇಶವನ್ನು ಸಿದ್ಧಪಡಿಸುವುದು, ಕೈಬೆರಳಚ್ಚು, ಭಾಷಾಂತರ, ಪ್ರೂಫ್‌ರೀಡಿಂಗ್, ಪೇಜ್ ಲೇ ಔಟ್, ಪತ್ರಿಕೆಯ ಮುದ್ರಣ, ಕೈಯಿಂದ ಮಡಚುವುದು, ಲೇಬಲ್ ಹಚ್ಚುವುದು, ಪ್ರತ್ಯೇಕ ದಿನಾಂಕಗಳಲ್ಲಿ ಅಂಚೆ ಕಛೇರಿಗೆ ಪತ್ರಿಕೆಗಳನ್ನು ಕೊಡುವುದು. ಅದೇ ರೀತಿಯಾಗಿ ಇಮೇಲ್‌ಗಳನ್ನು ಕಳುಹಿಸುವುದು. ಇತ್ತೀಚಿನ ದಿನಗಳಲ್ಲಿ ಸೇವೆಯು ಬೆಳೆದಿದೆ. ಶತ್ರುವು ಈ ಸಹೋದರ ಮತ್ತು ಸಹೋದರಿಯರನ್ನು ಗುರಿಯಾಗಿಸಿಕೊಂಡಿದ್ದಾನೆ. ಅನಾರೋಗ್ಯ, ಕೌಟುಂಬಿಕ ಸಮಸ್ಯೆಗಳು ಮತ್ತು ಆರ್ಥಿಕ ತೊಂದರೆಗಳ ಮೂಲಕ ಅವರನ್ನು ತೊಂದರೆ ಗೊಳಿಸಲು ಪ್ರಯತ್ನಿಸುತ್ತಾ ಇದ್ದಾನೆ. ದಯಮಾಡಿ ಈ 75 ಸದಸ್ಯರನ್ನು ಮತ್ತು ಅವರ ಕುಟುಂಬಗಳ ಏಳಿಗೆಗಾಗಿ ನಿಮ್ಮ ಪ್ರಾರ್ಥನೆಗಳಲ್ಲಿ ಜ್ಞಾಪಕ ಮಾಡಿಕೊಳ್ಳಿರಿ.
- ಸಮಯ ಕಳೆದ ಹಾಗೆ, ಕಾರ್ಮಿಕರ ಮನಸ್ಥಿತಿ, ಸರ್ಕಾರದ ನೀತಿಗಳು ಮತ್ತು ನಮ್ಮ ಸ್ನೇಹಿತರಿಂದ ಹಣಕಾಸಿನ ಬೆಂಬಲದ ಕುಸಿತ ದಿಂದಾಗಿ ಆಡಳಿತಾತ್ಮಕ ಸವಾಲುಗಳು ತೀವ್ರಗೊಂಡಿವೆ. ಅನೇಕ ಇಂದಿನ ನಂಬಿಕೆಯು ಸಮೃದ್ಧಿ, ತಪ್ಪಾದ ಸಿದ್ಧಾಂತಗಳು ಮತ್ತು ಆಧ್ಯಾತ್ಮಿಕ ಪ್ರಪಂಚದ ಆಕರ್ಷಣೆಗಳಿಂದ ಪ್ರಭಾವಿತರಾಗಿದ್ದಾರೆ. ಇದು ದೇವರ ನಿಜವಾದ ಸೇವಕರ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತದೆ. ನಾವು ನಿಜವಾಗಿ ಈ ಸನ್ನಿವೇಶಗಳಿಂದ ನಮಗೆ ಪರಿಣಾಮವಾಗಿದೆ. ಆದರೆ ನಮ್ಮ ದೇವರು ತನ್ನ ಸೇವಕರುಗಳನ್ನು ಮತ್ತು ಸೇವೆಯನ್ನು ಕಾಳಜಿ ವಹಿಸುವುದರಲ್ಲಿ ಆತನು ನಂಬಿಗಸ್ಥನಾಗಿದ್ದಾನೆ. ಈ ಸನ್ನಿವೇಶವು ಬದಲಾಗುವಂತೆ ದಯಮಾಡಿ ಪ್ರಾರ್ಥನೆ ಮಾಡಿರಿ.

### OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.


HON. EDITOR-IN-CHIEF
Rev. Angeline S. Kumari, M.A., M.Sc., M.Ed.

HON. MANAGING EDITOR
Pastor Alex Samson Sam, B.Th., M.Div.

GENERAL MANAGER
Bro. N. Prakasam, M.A., M.Sc.(C&P), PGDHRM, MBA.

ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)

EDITORIAL BOARD
Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran



EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858 95661 31858

E.MAIL
sam@echoofhiscall.org
biblecor@yahoo.co.in

WEBSITES
www.echoofhiscall.org
www.stpaulsmatriculation.com

YOUTUBE CHANNEL
Echo of His Call

- ನಮ್ಮ ಸಭೆಗಳು, **ನೆಹಮೀಯ ಸತ್ಯವೇದ ಕಾಲೇಜುಗಳು**, ದೈವಶಾಸ್ತ್ರ ದೂರಶಿಕ್ಷಣ ಕೋರ್ಸ್ ಗಳು, ಬೈಬಲ್ ಕೋರ್, ಸತ್ಯವೇದ ದೂರಶಿಕ್ಷಣ ಕೋರ್ಸ್‌ಗಳು. ಯುಟ್ಯೂಬ್ ಸೇವೆ, **ಸಂತ ಪೌಲ್ಸ್ ಮೆಟ್ರಿಕ್ಯುಲೇಶನ್ ಶಾಲೆ** ಮತ್ತು ಮುದ್ರಣಾಲಯವು ಬಹಳ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಾ ಇವೆ. ಏನೇ ಆಗಲಿ, ಈ ಎಲ್ಲಾ ಆರಂಭಗಳಿಗೆ ಆತ್ಮೀಕ ಮತ್ತು ಹಣಕಾಸಿನ ಪ್ರೋತ್ಸಾಹವು ಬೇಕಾಗಿದೆ.
- ನಮ್ಮ ಸೇವಾಕ್ಷೇತ್ರಗಳು, ಸಭೆಗಳು, ಮುದ್ರಣಾಲಯಗಳು, ಕಛೇರಿಗಳು, ಶಾಲೆಗಳು ಮತ್ತು ಸತ್ಯವೇದ ಕಾಲೇಜುಗಳಲ್ಲಿ ನಮ್ಮೊಂದಿಗೆ ಸಹಕರಿಸಲು ನಮಗೆ ಹೆಚ್ಚು ಸಮರ್ಪಿತ ಕೆಲಸಗಾರರ ಅಗತ್ಯವಿದೆ.
- ನಮ್ಮ **ನೆಹಮೀಯ ಹಿಂದಿ ಮತ್ತು ತಮಿಳು ಕಾಲೇಜು**ಗಳಲ್ಲಿ ವಿದ್ಯಾರ್ಥಿಗಳನ್ನು ನೇಮಿಸಿಕೊಳ್ಳುವುದು ನಮಗೆ ಸವಾಲಿನ ಸಂಗತಿಯಾಗಿದೆ. ಕೆಲವು ನಾಯಕರು ವಿವಿಧ ಕಾರಣಗಳಿಗಾಗಿ ತಮ್ಮ ಯುವಕರನ್ನು ಸತ್ಯವೇದ ಕಾಲೇಜಿಗೆ ಕಳುಹಿಸಲು ಹಿಂಜರಿಯುತ್ತಾರೆ. ಆದಾಗ್ಯೂ, ನಾವು ಬಹಳ ಎಚ್ಚರಿಕೆಯಿಂದ ಕಲಿಸುತ್ತೇವೆ. ತರಬೇತಿ, ಊಟ ಮತ್ತು ಅವರನ್ನು ವಿವಿಧ ಪ್ರದೇಶಗಳಿಗೆ ಹಿಂತಿರುಗಿ ಕಳುಹಿಸಿದ್ದಕ್ಕಿಂತ ಮುಂಚಿತವಾಗಿ ಅವರ ಅಗತ್ಯತೆಗಳನ್ನು ಪೂರೈಸುತ್ತೇವೆ. ದೇವರು ಅವರಿಗೆ ಕೊಟ್ಟ ಕರೆಯುವಿಕೆಯನ್ನು ಸಶಕ್ತಗೊಳಿಸುವುದಕ್ಕಾಗಿ ಅವರನ್ನು ಸೇವೆಗೆ ಕಳುಹಿಸುತ್ತೇವೆ. ನಮ್ಮ ತರಬೇತಿ ಯಲ್ಲಿ ಯಾವುದೇ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ. ನಾವು ತರಬೇತಿ ಕೊಟ್ಟ ವಿದ್ಯಾರ್ಥಿಗಳು ಈ ಸೇವಾ ಕ್ಷೇತ್ರಗಳಲ್ಲಿ ನಕ್ಷತ್ರಗಳ ಹಾಗೆ ಮಿನುಗುತ್ತಾ ಇದ್ದಾರೆ. ಈ ಸನ್ನಿವೇಶಕ್ಕಾಗಿ ದಯಮಾಡಿ ಪ್ರಾರ್ಥನೆ ಮಾಡಿರಿ.

ಈ ವರ್ಷದ ಸೆಪ್ಟಂಬರ್, ಅಕ್ಟೋಬರ್, ನವಂಬರ್, ಡಿಸೆಂಬರ್ ತಿಂಗಳಲ್ಲಿ ಅನೇಕ ಸೇವೆಗಳ ವೇಳಾಪಟ್ಟಿಯನ್ನು ಮಾಡಿದ್ದೇವೆ. ಈ ಎಲ್ಲಾ ಚಟುವಟಿಕೆಗಳಲ್ಲಿ ಸಂರಕ್ಷಣೆಗಾಗಿ ನಿಮ್ಮ ಪ್ರಾರ್ಥನೆ ಯನ್ನು ನಾವು ಕೇಳಿಕೊಳ್ಳುತ್ತೇವೆ.

ನಾವು ಸೇವೆಯಲ್ಲಿ ಒಟ್ಟಿಗೆ ಪ್ರಯಾಣಿಸುವಾಗ ನಿಮ್ಮ ಬೆಂಬಲವನ್ನು ನಾವು ಆಳವಾಗಿ ಪ್ರಶಂಸಿಸು ತ್ತೇವೆ. ನಿಮ್ಮ ಎಲ್ಲಾ ಪತ್ರಗಳು ಮತ್ತು ಇಮೇಲ್ ಗಳು ಪ್ರತಿಕ್ರಿಯಿಸಲು ನಾವು ಪ್ರಯತ್ನಿಸುತ್ತೇವೆ ಮತ್ತು ಹಣದ ಆದೇಶ, ಬ್ಯಾಂಕ್ ಚೆಕ್‌ಗಳು, ಡಿಮ್ಯಾಂಡ್ ಡ್ರಾಫ್ಟ್‌ಗಳು, ವರ್ಗಾವಣೆ, ನೆಟ್ ಬ್ಯಾಂಕಿಂಗ್ ಮತ್ತು ಜಿಪೇ ಮೂಲಕ ನಿಮ್ಮ ಎಲ್ಲಾ ಹಣಕಾಸಿನ ಕೊಡುಗೆಗಳನ್ನು ಅಂಗೀಕರಿಸುತ್ತೇವೆ. ಒಂದು ವೇಳೆ ನಮ್ಮ ಪ್ರತಿಕ್ರಿಯೆಗಳನ್ನು ಆತನ **ಕರೆಯ ಪ್ರತಿಧ್ವನಿ**ಯ ರಸೀದಿ, ಪತ್ರಿಕೆ, ನಿಗದಿತ ಸಮಯದಲ್ಲಿ ಪಡೆದುಕೊಳ್ಳದೆ ಇದ್ದರೆ, ದಯಮಾಡಿ ನಮ್ಮನ್ನು ಸಂಪರ್ಕಿಸಿರಿ +91 9841071858 ಮತ್ತು +91 9841271858. ನಿಮಗಾಗಿ ನಾವು ಇಲ್ಲಿ ಸಹಾಯ ಮಾಡುವುದಕ್ಕೆ ಇದ್ದೇವೆ.

**ಇಂತಿ ನಿಮ್ಮ ಕ್ರಿಸ್ತಯೇಸುವಿನಲ್ಲಿ ಸೇವಕರುಗಳು,**
**ಪಾ. ಅಲೆಕ್ಸ್ ಸ್ಯಾಮುಸನ್ ಸ್ಯಾಮ್**
**ಪಾ. ಸ್ಯಾಮ್ ಸೆಲ್ವರಾಜ್**
**919841071858/91984127858**

## For Your Kind Attention!

Our 5 minute **Echo of His Call** YouTube messages are being broadcasted from 2.00 A.M. in Tamil, Telugu, English and Hindi (everyday). You can receive the Grace of God by watching the messages.

Moreover, save my mobile numbers (+91) 98410 71858, (+91) 98412 71858 (personal) in your mobile phones.

**- Pr. S. Sam Selva Raj**

*(1ನೇ ಪುಟದಿಂದ)*

ಕೆಲವು ವ್ಯಕ್ತಿಗಳು ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆ ಎರಡರಲ್ಲೂ ಉತ್ಕೃಷ್ಟರಾಗಿದ್ದಾರೆ.

ಬೇರೆಯವರು ಯೋಜನೆ ಮಾಡಬಹುದು ಆದರೆ ಕಾರ್ಯಸೂಚಿಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸೆಣಸಾಡುತ್ತಾರೆ.

ಇನ್ನು ಒಂದು ಗುಂಪು ಅವರು ಯಾವುದೇ ಯೋಜನೆಯನ್ನು ಮಾಡುವುದಿಲ್ಲ. ಬದಲಾಗಿ ಹರಿವಿನೊಂದಿಗೆ ಹೋಗಲು ಆಯ್ಕೆ.

ನನಗೆ ಆಶ್ಚರ್ಯವಾಗಿದೆ! ಯಾವ ಗುಂಪಿಗೆ ಸಂಬಂಧಪಟ್ಟವರು? ಸತ್ಯವೇದವು ನಮಗೆ ಜ್ಞಾಪಕಪಡಿಸುತ್ತದೆ. ಜ್ಞಾನೋಕ್ತಿಗಳು 19:21 ರಲ್ಲಿ, **ಮನುಷ್ಯನ ಮನಸ್ಸಿನಲ್ಲಿ ಅನೇಕ ಸಂಕಲ್ಪಗಳಿವೆ; ಯೆಹೋವನ ಸಂಕಲ್ಪವೇ ಈಡೇರುವುದು.**

ನಮ್ಮ ಭವಿಷ್ಯಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸಬಹುದು, ಶಿಕ್ಷಣ, ಮದುವೆಗಳು, ಮಕ್ಕಳು, ಕೆಲಸಗಳು ಮತ್ತು ಆಸ್ತಿಯನ್ನು ಪಡೆದುಕೊಳುವುದಕ್ಕಾಗಿ. ಕೆಲವುಗಳನ್ನು ನಾವು ಹೆಸರಿಸಬಹುದು. ನಾವು ನಿರಂತರವಾಗಿ ಯೋಜನೆ ಮಾಡುತ್ತೇವೆ ಮತ್ತು ಕಾರ್ಯತಂತ್ರ ರೂಪಿಸುತ್ತೇವೆ. ಏನೇ ಹಾಗಲಿ, ಅದು ಅಂತಿಮವಾಗಿ ಕರ್ತನ ಆಸೆಗಳು ಕಾರ್ಯರೂಪಕ್ಕೆ ಬರುತ್ತವೆ. ಇನ್ನೊಂದು ವಚನವು ಜ್ಞಾನೋಕ್ತಿಗಳು 16:9ರಲ್ಲಿ ಉಲ್ಲೇಖಿಸಿದೆ. **ಮನುಷ್ಯನು ತನ್ನ ಮನದಂತೆ ದಾರಿಯನ್ನಾರಿಸಿ ಕೊಂಡರೂ ಯೆಹೋವನೇ ಅವನಿಗೆ ಗತಿಯನ್ನು ಏರ್ಪಡಿಸುವನು. ರೂಪಿಸು ಎಂಬ ಪದವು ಕೆಜೆವಿಯಲ್ಲಿ ಉಪಯೋಗಿಸಲ್ಪಟ್ಟಿದೆ.** ತಮಿಳಿನಲ್ಲಿ ಮನುಷ್ಯನ ಹೃದಯವು ಯೋಚಿಸುವಂತೆ ಅದನ್ನು ಸ್ಪಷ್ಟಪಡಿಸುತ್ತದೆ. ನಮ್ಮ ಮಾರ್ಗಗಳನ್ನು ಸ್ಥಾಪಿಸುವ ಅಥವಾ ನಿರ್ದೇಶಿಸುವವನು ಕರ್ತನು ಎಂದು ಒತ್ತಿಹೇಳುತ್ತದೆ.

ಚಿಂತನೆಯು ಮನುಷ್ಯರಿಗೆ ದೇವರು ನೀಡಿದ ಅಸಾಧಾರಣ ಕೊಡುಗೆಯಾಗಿದೆ. ಮನಶ್ಶಾಸ್ತ್ರಜ್ಞರು ಸಹ ಆಲೋಚನೆಗಳು ನಂಬಲಾಗದಷ್ಟು ಶಕ್ತಿಯುತವಾಗಿದೆ ಎಂದು ದೃಢೀಕರಿಸುತ್ತಾರೆ; ಅವು ನಮ್ಮ ಕ್ರಿಯೆಗಳು ಮತ್ತು ಭಾವನೆಗಳನ್ನು ನಿರ್ದೇಶಿಸುತ್ತವೆ. ಇದಕ್ಕಾಗಿ ಸತ್ಯವೇದವು ನಮಗೆ ಸಲಹೆಯನ್ನು ಕೊಡುತ್ತದೆ. ನಿಮ್ಮ ಮನಸ್ಸನ್ನು ಕಾಪಾಡಿ. ನಾವು ಏನು ಅನುಮತಿಸುತ್ತೇವೆಯೋ ಅದು ನಮ್ಮ ಆಲೋಚನೆಗಳನ್ನು ರೂಪಿಸುತ್ತದೆ ಮತ್ತು ನಮ್ಮ ಆಲೋಚನೆಗಳು ನಾವು ಏನು ಹೇಳುತ್ತೇವೆ ಮತ್ತು ನಾವು ಹೇಗೆ ವರ್ತಿಸುತ್ತೇವೆ ಎಂಬುದರ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ಚಿಂತನೆಯು ನಮ್ಮ ಜೀವಿತದ ನಿರ್ಣಾಯಕ ಅಂಶವಾಗಿದೆ.

ಒಂದು ಆಲೋಚನೆಯು ನಮ್ಮ ಜೀವನದ ಪಥವನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ದೇವರು ನಮ್ಮ ಬಗ್ಗೆ ಏನು ಯೋಚಿಸುತ್ತಾನೆಂದು ನಾವು ಅನ್ವೇಷಿಸೋಣ. ಯೆರಮೀಯ 29:11 ಉಲ್ಲೇಖಿಸುತ್ತದೆ. **ನಿಮಗಾಗಿ ನನಗೆ ಆಲೋಚನೆಗಳು ಮತ್ತು ಯೋಜನೆಗಳು ಇವೆ.** ದೇವರು ಸುಮ್ಮನೆ ಯೋಜನೆಗಳನ್ನು ಹೊಂದಿರುವುದಿಲ್ಲ. ಆತನು ನಿಮ್ಮ ಬಗ್ಗೆ ಆಲೋಚನೆ ಮಾಡುತ್ತಾನೆ. ಇದು ತೋರಿಸುತ್ತದೆ ಆತನು ಬಹಳ ಸಕ್ರಿಯವಾಗಿ

ನಿಮಗಾಗಿ ಚಿಂತೆ ಮಾಡುತ್ತಾನೆ. ನೀವು ಸೃಷ್ಟಿಕರ್ತನನ್ನು ಊಹಿಸಿಕೊಳ್ಳಿರಿ. ಈ ಪ್ರಪಂಚದ ಘಟನೆಗಳನ್ನು ಎಷ್ಟು ಸುಂದರವಾಗಿ ಮಾಡಿದ್ದಾನೆ. ನನ್ನ ಬಗ್ಗೆ ಆತನು ಆಲೋಚನೆಯುಳ್ಳವನಾಗಿದ್ದಾನೆಯೇ? ಆತನು ಕೇವಲ ನನ್ನ ಭವಿಷ್ಯತಿನ ಬಗ್ಗೆ ಅಲ್ಲ. ಆದರೆ ನನ್ನ ಮುಂದಿನ ಸಂತಾನದ ಬಗ್ಗೆ ಕೂಡ. ನನ್ನ ಬಗ್ಗೆ ಕಾಳಜಿ ವಹಿಸುವ ಮತ್ತು ನನ್ನ ಬಗ್ಗೆ ಯೋಚಿಸುವ ದೇವರನ್ನು ನಾನು ನಂಬುತ್ತೇನೆ ಎಂದು ತಿಳಿದುಕೊಳ್ಳುವುದು ಆಳವಾದ ಭರವಸೆ ನೀಡುತ್ತದೆ.

**ಸತ್ಯವೇದವು ನಮಗೆ ಕಲಿಸುತ್ತದೆ, ನಿಮ್ಮ ಆಲೋಚನೆಗಳು ನನ್ನ ಆಲೋಚನೆಗಳಲ್ಲ, ನನ್ನ ಮಾರ್ಗಗಳು ನಿಮ್ಮ ಮಾರ್ಗಗಳು ಅಲ್ಲ** (ಯೆಶಾಯ 55:8). ಇದು ಯಾಕೆ? ಯಾಕೆಂದರೆ ದೇವರು ನಮ್ಮನ್ನು ಗ್ರಹಿಸುವ ರೀತಿ ಮತ್ತು ಆತನು ನಮ್ಮ ಬಗ್ಗೆ ಯೋಚಿಸುವ ರೀತಿ ನಾವು ನಮ್ಮ ಬಗ್ಗೆ ಹೇಗೆ ಯೋಚಿಸುತ್ತೇವೆ ಎನ್ನುವುದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ.

ಉದಾಹರಣೆಗೆ, ನ್ಯಾಯಸ್ಥಾಪಕರು 6 ರಲ್ಲಿ ಗಿದ್ಯೋನ್‌ನನ್ನು ಪರಿಗಣಿಸೋಣ, ಅವನು ದ್ರಾಕ್ಷೆಯ ಅಲೆಯ ಮರೆಯಲ್ಲಿ ಗೋದಿಯನ್ನು ಬಡಿಯುತ್ತಿದ್ದನು. ಮಿದ್ಯಾನ್ಯರಿಂದ ಬಚ್ಚಿಟ್ಟು ಕೊಂಡಿದ್ದನು. ಅವನು ಬಹಿರಂಗವಾಗಿ ಹಾಗೆ ಮಾಡಲು ಧೈರ್ಯವನ್ನು ಹೊಂದಿರಲಿಲ್ಲ ಮತ್ತು ತನ್ನನ್ನು ತಾನು ಮರೆ ಮಾಡಿಕೊಂಡಿದ್ದನು. ಏನೇ ಆಗಲಿ, ಕರ್ತನು ಅವನನ್ನು ಎದುರಿಸಿದಾಗ, ಗಮನಿಸಿರಿ ಹೇಗೆ ಅವನನ್ನು ಸಂಬೋಧಿಸುತ್ತಾನೆ. ನ್ಯಾಯಸ್ಥಾಪಕರು 6:11-12



***The Angel appeared to Gideon***

ಆಮೇಲೆ ಯೆಹೋವನು ದೂತನು ಬಂದು ಒಫ್ರದಲ್ಲಿದ್ದ ಏಲಾ ವೃಕ್ಷದ ಅಡಿಯಲ್ಲಿ ಕೂತುಕೊಂಡನು. **ಅದು ಅಬೀಯೆಜೆರೆನ ಗೋತ್ರದವನಾದ ಯೋವಾಷನದಾಗಿತ್ತು, ಅವನ ಮಗನಾದ ಗಿದ್ಯೋನನು ಮಿದ್ಯಾನ್ಯರಿಗೆ ಗೊತ್ತಾಗದ ಹಾಗೆ ಅಲ್ಲಿನ ದ್ರಾಕ್ಷೆಯ ಅಲೆಯ ಮರೆಯಲ್ಲಿ ಗೋದಿಯನ್ನು ಬಡಿಯುತ್ತಿದ್ದನು. ಯೆಹೋವನು ದೂತನು ಗಿದ್ಯೋನನಿಗೆ ಪ್ರತ್ಯಕ್ಷನಾಗಿ ಅವನಿಗೆ ಪರಾಕ್ರಮಶಾಲಿಯೇ, ಯೆಹೋವನು ನಿನ್ನ ಸಂಗಡ ಇದ್ದಾನೆ ಅಂದನು.**

ಕರ್ತನು ಗಿದ್ಯೋನನ್ನು ಪರಾಕ್ರಮದ ಪರಾಕ್ರಮಶಾಲಿ ಎಂದು ಉಲ್ಲೇಖಿಸುವಾಗ, ಗಿದ್ಯೋನ ತನ್ನನ್ನು ವಿಭಿನ್ನವಾಗಿ ಗ್ರಹಿಸುತ್ತಾನೆ. ನ್ಯಾಯಸ್ಥಾಪಕರು 6:15ರಲ್ಲಿ ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾನೆ. **ಸ್ವಾಮಿ, ನಾನು ಇಸ್ರಾಯೇಲ್ಯರನ್ನು ರಕ್ಷಿಸುವುದು ಹೇಗೆ? ಮನಸ್ಸೇ ಕುಲದಲ್ಲಿ ನನ್ನ ಮನೆಯು ಕನಿಷ್ಠವಾದದ್ದು; ಮತ್ತು ನಾನು ನನ್ನ ಕುಟುಂಬದಲ್ಲಿ ಅಲ್ಪನು.**

ಗಿದ್ಯೋನನ್ನು ತನ್ನನ್ನು ಅತ್ಯಂತ ದುರ್ಬಲ ಮತ್ತು ಕಡಿಮೆ ಎಂದು ಪರಿಗಣಿಸಿದನು. ಆದರೂ ದೇವರು ಅವನನ್ನು ತನ್ನ ಜನರನ್ನು ರಕ್ಷಿಸಲು ಮತ್ತು ಅವರ ಶತ್ರುಗಳನ್ನು ಸೋಲಿಸಲು ಉದ್ದೇಶಿಸಲಾದ ಪ್ರಬಲ ವ್ಯಕ್ತಿಯಾಗಿ ನೋಡುತ್ತಾನೆ.

ಅಗಾಗ್ಗೆ, ನಮ್ಮ ಸ್ವಂತ ಆಲೋಚನೆಗಳು ನಮ್ಮನ್ನು ಪ್ರಗತಿಗೆ ಅಡ್ಡಿಪಡಿಸುತ್ತವೆ. ನಮಗೆ ನೀಡಲಾದ ಉಡುಗೊರೆಗಳು, ಪ್ರತಿಭೆಗಳು ಮತ್ತು ಕರೆಗಳನ್ನು ನಾವು ಕಡಿಮೆ ಅಂದಾಜು ಮಾಡುತ್ತೇವೆ. ಇದು ನಮ್ಮ ದೈವಿಕ ಉದ್ದೇಶವನ್ನು ಪೂರೈಸುವಲ್ಲಿ ವಿಫಲಗೊಳ್ಳುತ್ತದೆ.

## ಇಬ್ಬರು ಐಗುಪ್ತರು ಇಬ್ಬರು ಇಸ್ರಾಯೇಲರು

ಇದಕ್ಕೆ ವಿರುದ್ಧವಾಗಿ ಕೆಲವು ವ್ಯಕ್ತಿಗಳು ಅಕಾಲಿಕವಾಗಿ ವರ್ತಿಸುತ್ತಾರೆ. ದೇವರ ಸಮಯಕ್ಕಾಗಿ ಕಾಯುವ ಬದಲು ತಮ್ಮದೇ ಆದ ಯೋಜನೆಗಳನ್ನು ಅನುಸರಿಸುತ್ತಾರೆ. ಮೋಶೆಯನ್ನು ಗಮನಿಸಿರಿ : ಎರಡು ಐಗುಪ್ತರು ಜಗಳ ಮಾಡುವುದನ್ನು ನೋಡಿದಾಗ, ಅವನು ಮಧ್ಯ ಪ್ರವೇಶಿಸಿದನು. ಆತನು ತನ್ನ ಜನರನ್ನು ಬಿಡುಗಡೆ ಮಾಡಬಹುದೆಂದು ನಂಬಿ. ಏನೇ ಆಗಲಿ, ಇದು ದೇವರು ನೇಮಿಸಿದ ಸಮಯವಾಗಿರಲಿಲ್ಲ. ಇಬ್ಬರು ಇಸ್ರಾಯೇಲ್ಯರ ನಡುವಿನ ವಿವಾದವನ್ನು ಪರಿಹರಿಸುವ ಆತನ ಪ್ರಯತ್ನವು ಅಂತಿಮವಾಗಿ ದುರಂತದಲ್ಲಿ ಕೊನೆಗೊಂಡಿತು.

## ಆಲೋಚನೆಗಳ ಶಕ್ತಿ!

ನಮ್ಮ ಆಲೋಚನೆಗಳು ಅಸಾಮಾನ್ಯವಾದ ಶಕ್ತಿಯುಳ್ಳವಾಗಿವೆ. ಅವು ನಮ್ಮ ನಡವಳಿಕೆ ಮತ್ತು ಭಾವನೆಗಳನ್ನು ಗಮನಾರ್ಹವಾಗಿ ಪ್ರಭಾವ ಬೀರುತ್ತವೆ. ಮನಶಾಸ್ತ್ರಜ್ಞರು ಈ ಪ್ರಭಾವವನ್ನು ಒಪ್ಪಿಕೊಳ್ಳುತ್ತಾರೆ. ಅದಕ್ಕಾಗಿಯೇ ಇದು ಅರಿವಿನ

*(6ನೇ ಪುಟಕ್ಕೆ)*

NEHEMIAH BIBLE
RESIDENTIAL / EVENING COLLEGE,
Velachery / Chepauk & Santhoshapuram, Chennai.
Medium : Hindi / Tamil
Recognised by International Christian Leaders & Senior Pastors for the past 55 years
Qualification : 10th Standard & above
Diploma in Theology
Rush for admission!
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
✶ ONLINE CLASSES ARE AVAILABLE ✶

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)
ತ್ವರಿತಗೊಳಿಸುವುದು (II ತಿಮೋಥಿ. 1:6)

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ಅಕ್ಟೋಬರ್ 2024 ರಿಂದ 18 ನವೆಂಬರ್ 2024 ರ ವರೆಗೆ**

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)



## ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವಾಗಲಿ!!...

ಅಕ್ಟೋಬರ್ 19 : ಅನೇಕ ಅಡ್ಡಿತಡೆಗಳ ನಡುವೆಯು ಆತನ ರಾಜ್ಯವನ್ನು ಕಟ್ಟುವದಕ್ಕಾಗಿ ಆತನ **ಕರೆಯ ಪ್ರತಿಧ್ವನಿಯ** ಸೇವೆಯನ್ನು ಸಶಕ್ತಗೊಳಿಸುವುದಕ್ಕಾಗಿ.

ಅಕ್ಟೋಬರ್ 20 : **ಸಂತ ಪೌಲ ಮೆಟ್ರಿಕ್ಯುಲೇಶನ್ ಶಾಲೆ**, ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಮೇಲೆ ಆತನ ಆಶೀರ್ವಾದಕ್ಕಾಗಿ.

ಅಕ್ಟೋಬರ್ 21 : ಆತನ **ಕರೆಯ ಪತ್ರಿಧ್ವನಿಯ** ಪತ್ರಿಕೆ ಸೇವೆಯನ್ನು ಬೆಂಬಲಿಸುವ ಸಮರ್ಪಿತ ಸಹ ಸಂಪಾದಕರೊಂದಿಗೆ ನಮ್ಮ ಸೇವೆಯನ್ನು ಆಶೀರ್ವದಿಸಿದ್ದಾರೆ.

ಅಕ್ಟೋಬರ್ 22 : ನಮ್ಮ **ಸಂತ ಪೌಲ ಮೆಟ್ರಿಕ್ಯುಲೇಶನ್ ಶಾಲೆ**ಗೆ ಹೊಸ ಮುಖ್ಯೋಪಾಧ್ಯಾಯರು ನೇಮಕಾತಿಯ ಮೇಲ ಆತನ ಆಶೀರ್ವಾದಕ್ಕಾಗಿ.

ಅಕ್ಟೋಬರ್ 23 : ನಮ್ಮ ಮುದ್ರಣಾಲಯದಲ್ಲಿ ನಮ್ಮ ಪತ್ರಿಕೆಯನ್ನು 16 ಭಾಷೆಗಳಲ್ಲಿ ಮುದ್ರಿಸಲು ಮತ್ತು ಪ್ರಕಟಿಸಲು ಮತ್ತು ಅದನ್ನು ಸೇವಾಕ್ಷೇತ್ರಗಳಿಗೆ ವಿತರಿಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ.

ಅಕ್ಟೋಬರ್ 24 : ಆತನ **ಕರೆಯ ಪ್ರತಿಧ್ವನಿಯ ಸೇವೆಯ ಸಿಬ್ಬಂದಿ ವರ್ಗದವರು** ಮತ್ತು ಅವರ ಕುಟುಂಬಗಳ ಆತನ ಕಾಳಜಿಗಾಗಿ ಸ್ತೋತ್ರವಾಗಲಿ.

ಅಕ್ಟೋಬರ್ 25 : ಆತನ **ಕರೆಯ ಪ್ರತಿಧ್ವನಿಯ ಸೇವೆಯ ಯೂಟುಬ್**‌ನ 5 ನಿಮಿಷ ಸಂದೇಶಗಳ ಫಲಿತಾಂಶ ಮತ್ತು ಸಾಕ್ಷಿಗಳಿಗಾಗಿ ಆತನಿಗೆ ಸ್ತೋತ್ರವಾಗಲಿ.

ಅಕ್ಟೋಬರ್ 26 : ನಮ್ಮ ಸುವಾರ್ತ ಮುದ್ರಣಾಲಯವು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಾ ಇದೆ ಅದಕ್ಕಾಗಿ ಧನ್ಯವಾದಗಳು ಮತ್ತು ನಮ್ಮ ಸಮರ್ಪಿತ ಕೆಲಸಗಾರರ ಸಹಕಾರಕ್ಕಾಗಿ.

ಅಕ್ಟೋಬರ್ 27 : ನಾವು ನಮ್ಮ ಪ್ರಾರ್ಥನಾ ಸಹಭಾಗಿಗಳಿಗೆ, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವನ ಸಹಭಾಗಿಗಳು, ದೊಡ್ಡ ಅಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳಿಗಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಅಕ್ಟೋಬರ್ 28 : ನಮ್ಮ ವೈವಿಧ್ಯಮಯ ಸೇವೆಯಲ್ಲಿ ನಡೆಯುತ್ತಿರುವ ಮಾರ್ಗದರ್ಶನವನ್ನು ನಾವು ಪ್ರಶಂಸಿಸುತ್ತೇವೆ.

ಅಕ್ಟೋಬರ್ 29 : ನಮ್ಮ **ಸತ್ಯವೇದ ದೂರಶಿಕ್ಷಣ** ಮತ್ತು **ದೈವಶಾಸ್ತ್ರ ಕೋರ್ಸ್‌ಗಳು ಬೆಳವಣಿಗೆಯಾಗುತ್ತಾ ಇವೆ. ಅದಕ್ಕಾಗಿ ನಾವು ಸಂಭ್ರಮಿಸುತ್ತೇವೆ.**

ಅಕ್ಟೋಬರ್ 30 : **ನೆಹಮೀಯ ಸತ್ಯವೇದ ಕಾಲೇಜು** ಸುಗಮವಾಗಿ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸುವಲ್ಲಿ ಆತನ ಕರುಣೆಗಾಗಿ ನಾವು ಕೃತಜ್ಞರಾಗಿರುತ್ತೇವೆ.

ಅಕ್ಟೋಬರ್ 31 : ನಮ್ಮ ಮಿಷನರಿಗಳು ಮತ್ತು ಅವರ ಕುಟುಂಬಗಳಿಗೆ ನೀಡಿದ ಆಶೀರ್ವಾದ ಗಳಿಗಾಗಿ ನಾವು ದೇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನವೆಂಬರ್ 01 : ವಿವಿಧ ಸೇವೆಗಳ ಮೂಲಕ ಸುವಾರ್ತೆಯನ್ನು ಪ್ರಚಾರ ಮಾಡುವ ನಮ್ಮ ಹಿರಿಯ ಸಭಾ ಪಾಲಕರ ಬದ್ಧತೆಯನ್ನು ನಾವು ಅಂಗೀಕರಿಸುತ್ತೇವೆ.

ನವೆಂಬರ್ 02 : ನಮ್ಮ ಮುಖ್ಯ ಸಭೆಯಲ್ಲಿ ಪುರುಷರ ಸಭೆಗೆ ಅತನ ಆಶೀರ್ವಾದವನ್ನು ಹುಡುಕುತ್ತೇವೆ.

ನವೆಂಬರ್ 03 : ಕಳೆದ ತಿಂಗಳಲ್ಲಿ ನಮ್ಮ ಹಣಕಾಸಿನ ಮತ್ತು ಆತ್ಮೀಕ ಅಗತ್ಯತೆಗಳನ್ನು ಪೂರೈಸಿದ್ದಕ್ಕಾಗಿ ಆತನಿಗೆ ಧನ್ಯವಾದಗಳು.

## ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥನೆ ಮಾಡಿರಿ.

ನವೆಂಬರ್ 03 : ಕಳೆದ ತಿಂಗಳಲ್ಲಿ ನಮ್ಮ ಹಣಕಾಸಿನ ಮತ್ತು ಆತ್ಮೀಕ ಅಗತ್ಯತೆಗಳನ್ನು ಪೂರೈಸಿದ್ದಕ್ಕಾಗಿ ಆತನಿಗೆ ಧನ್ಯವಾದಗಳು.

ನವೆಂಬರ್ 04 : ಪ್ರಪಂಚದಾದ್ಯಂತಹ ಇರುವ ಮಿಷನರಿಗಳ ಮತ್ತು ಸಭಾಪಾಲಕರ ದೈವತ್ವದ ಸಂರಕ್ಷಣೆಗಾಗಿ.

ನವೆಂಬರ್ 05 : ಯುಕರೇನ್ ಮತ್ತು ರಷ್ಯಾ ನಡುವೆ ನಡೆಯುತ್ತಿರುವ ಯುದ್ಧವು ನಿಲ್ಲುವಂತೆ ಮತ್ತು ಎರಡು ರಾಷ್ಟ್ರಗಳ ನಡುವೆ ಶಾಂತಿ ಮತ್ತು ಐಕ್ಯತೆಗಾಗಿ.

ನವೆಂಬರ್ 06 : ಎಲ್ಲಾ ಕ್ರೈಸ್ತ ಸಂಘ ಸಂಸ್ಥೆಗಳು ಮತ್ತು ಸಭೆಗಳ ಮೇಲೆ ಆತನ ಆಶೀರ್ವಾದ ಮತ್ತು ಸಂರಕ್ಷಣೆಗಾಗಿ.

ನವೆಂಬರ್ 07 : ಎಲ್ಲಾ ವಿಶ್ವಾಸಿಗಳ ಹೃದಯವು ಪ್ರಕಾಶಿಸುವಂತೆ.

ನವೆಂಬರ್ 08 : ನಮ್ಮ ಸಹೋದರಿ, ಜೆಸ್ಸಿ ವೀಣಾ ಸ್ಯಾಮ್ ಸೆಲ್ವರಾಜ್‌ರವರು ಮತ್ತೆ ಅಸ್ವಸ್ಥರಾಗಿದ್ದಾರೆ.

ನವೆಂಬರ್ 09 : ಪ್ರಪಂಚದಾದ್ಯಂತ ಇರುವ ಎಲ್ಲಾ ಆತ್ಮೀಕ ನಾಯಕರುಗಳಿಗಾಗಿ.

ನವೆಂಬರ್ 10 : ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯ ಬರವಣಿಗೆಯಲ್ಲಿ ಆತನ ಉದಾರ ಮಾರ್ಗದರ್ಶನಕ್ಕಾಗಿ.

ನವೆಂಬರ್ 11 : ನಮ್ಮ ಸೇವಾಕ್ಷೇತ್ರಗಳಲ್ಲಿ ಕೆಲಸ ಮಾಡುವವ ಕೆಲಸಗಾರರಿಗಾಗಿ.

ನವೆಂಬರ್ 12 : ಅತನ **ಕರೆಯ ಪ್ರತಿಧ್ವನಿ**ಯ ಸೇವೆಗೆ ಹೆಚ್ಚು ಸಮರ್ಪಣೆಯುಳ್ಳ ಕೆಲಸಗಾರರನ್ನು ದೇವರು ಕರೆದುಕೊಂಡು ಬರುವಂತೆ.

ನವೆಂಬರ್ 13 : ನಮ್ಮ ಹಣಕಾಸಿನ ಅಗತ್ಯತೆಗಳಿಗಾಗಿ, ಕೆಲಸಗಾರರ ಸಂಬಳಕ್ಕಾಗಿ, ಮುದ್ರಣಾಲಯದ ಸಾಮಗ್ರಿಗಳು, ಅಂಚೆ ಮತ್ತು ನಮ್ಮ ಸೇವೆಗೆ ಸಂಬಂಧಪಟ್ಟ ಸಾರಿಗೆ ವೆಚ್ಚಗಳು.

ನವೆಂಬರ್ 14 : ಮಾದಕ ವ್ಯಸನಿಗಳು ಮತ್ತು ತಪ್ಪು ಮಾಡುವವರಿಗೆ ಸಂಪೂರ್ಣ ಪರಿಹಾರ.

ನವೆಂಬರ್ 15 : ಈ ಪೀಳಿಗೆಯ ಯುವಕರು ಮತ್ತು ಮಕ್ಕಳಿಗಾಗಿ ಪ್ರಾರ್ಥಿಸಲು **ಯುವ ಮತ್ತು ಮಕ್ಕಳ ಆರೈಕೆ ಸೇವೆಗಾಗಿ** ನಮ್ಮ ಜಾಗತಿಕ ದೃಷ್ಟಿಗಾಗಿ ದಾಖಲಾತಿಯಲ್ಲಿ ಹೆಚ್ಚಳ ವಾಗುವುದಕ್ಕಾಗಿ.

ನವೆಂಬರ್ 16 : ಎಲ್ಲಾ ಧರ್ಮಗಳ ಐಕ್ಯತೆಗಾಗಿ.

ನವೆಂಬರ್ 17 : ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯೊಂದಿಗೆ ತಲುಪುವಂತೆ ನಮಗೆ ಆತನು ಶಕ್ತಿಕೊಡುವಂತೆ.

ನವೆಂಬರ್ 18 : ನಮ್ಮ ನಾಯಕರುಗಳಿಗಾಗಿ, ಸರ್ಕಾರಿ ಉದ್ಯೋಗಿಗಳು ಮತ್ತು ಅಧಿಕಾರಿಗಳ ಮೇಲೆ ಆತನ ದಯೆಯು ಮತ್ತು ಕೃಪೆಗಾಗಿ.

*(4ನೇ ಪುಟದಿಂದ)*
ವರ್ತನೆಯ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. (ಸಿಬಿಟಿ)

ಆಲೋಚನೆಗಳು ನಮ್ಮ ಜೀವನದ ನಿರ್ಣಾಯಕ ಅಂಶವನ್ನು ಪ್ರಾಬಲ್ಯಗೊಳಿಸುತ್ತವೆ. ಅದಕ್ಕಾಗಿಯೇ ಸತ್ಯವೇದವು ನಮ್ಮ ಮನಸ್ಸನ್ನು ಕಾಪಾಡಿಕೊಳ್ಳಲು ಸಲಹೆ ನೀಡುತ್ತದೆ. ನಾವು ನಮ್ಮ ಮನಸ್ಸಿನಲ್ಲಿ ಏನನ್ನು ಅನುಮತಿಸುತ್ತೇವೆಯೋ ಅದು ನಾವು ಯೋಚಿಸುವ ರೀತಿಯನ್ನು ಗಾಢವಾಗಿ ಪ್ರಭಾವಿಸುತ್ತದೆ. ಒಂದು ತಪ್ಪು ಆಲೋಚನೆಯು ನಮ್ಮ ಜೀವನದ ಸಂಪೂರ್ಣ ಹಾದಿಯನ್ನು ಹಳಿ ತಪ್ಪಿಸಬಹುದು ಮತ್ತು ದೇವರು ನಮಗಾಗಿ ಹೊಂದಿರುವ ಯೋಜನೆಗಳು ಮತ್ತು ಉದ್ದೇಶ ಗಳಿಂದ ನಮ್ಮನ್ನು ವಿಚಲಿತಗೊಳಿಸಬಹುದು.

## ದಾವಿದನ ಒಳನೋಟಗಳು !

ದಾವಿದನು ಒಬ್ಬ ವ್ಯಕ್ತಿಯಾಗಿದ್ದು, ದೇವರನ್ನು ಮೆಚ್ಚಿಸಲು ಪ್ರಯತ್ನಿಸಿದನು ಮತ್ತು ಆತನನ್ನು ತನ್ನ ಜೀವನದ ಕೇಂದ್ರದಲ್ಲಿ ಇರಿಸಿದನು. ಸೌಲನು ದಾವಿದನನ್ನು ನಿರಂತರವಾಗಿ ಅನ್ವೇಷಣೆಯ ಹೊರತಾಗಿಯೂ, ದೇವರು ದಾವಿದನನ್ನು ಸೌಲನ ಕೈಗಳಿಂದ ಬಿಡುಗಡೆ ಮಾಡಲಿಲ್ಲ. ಮೂರು ಸನ್ನಿವೇಶಗಳಲ್ಲಿ, ದೇವರು ಸೌಲನನ್ನು ದಾವಿದನ ಹಿಡಿತಕ್ಕೆ ಒಪ್ಪಿಸಿದನು. ಏನೇ ಆಗಲಿ, ದಾವಿದನು ಸೌಲನಿಗೆ ಯಾವುದೇ ಹಾನಿ ಮಾಡದಂತೆ ಆರಿಸಿಕೊಂಡನು. ಆತನು ಕರ್ತನ ಅಭಿಷಕ್ತನು ಎಂದು ಘೋಷಿಸುತ್ತಾನೆ. ಸೌಲನ ಮೇಲಿರುವ ಅಭಿಷೇಕವನ್ನು ದಾವಿದನು ಮರ್ಯಾದೆ ಕೊಟ್ಟನು. ಸೌಲನು ತನ್ನ ದೈವಿಕ ನೇಮಕಾತಿಗೆ ಅನುಗುಣವಾಗಿ ವರ್ತಿಸದಿದ್ದರೂ ಸಹ. ಒಂದು ಸನ್ನಿವೇಶದಲ್ಲಿ ದಾವಿದನು ಕೆಲಾಕ್ಕೆ ಹೋದಾಗ, ಸಮೃದ್ಧಿಯಾದ ಪಟ್ಟಣ, ಸೌಲನು ಅವನನ್ನು ಸೆರೆಹಿಡಿಯಲು ಉತ್ತಮವಾದ ಅವಕಾಶವೆಂದು ಪರಿಗಣಿಸಿದನು. ದಾವಿದನು ಈ ಬಲವಾದ ಗೋಡೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ (1 ಸಾಮುವೇಲ 23). ಆದಾಗ್ಯೂ, ದೇವರು ದಾವಿದನನ್ನು ಸಂರಕ್ಷಣೆ ಮಾಡಿರುವುದನ್ನು ನಾವು ನೋಡುತ್ತೇವೆ. ಮತ್ತೆ, 26 ನೇ ಅಧ್ಯಾಯದಲ್ಲಿ, ಸೌಲನು ದಾವಿದನನ್ನು ಸೆರೆಹಿಡಿಯುವ ಹತ್ತಿರದಲ್ಲಿ ಇದ್ದನು. ಆದರೆ ಮತ್ತೊಂದು ಸಾರಿ, ದೇವರು ದಾವಿದನನ್ನು ತಪ್ಪಿಸಿಕೊಳ್ಳುವುದಕ್ಕೆ ಸಹಾಯ ಮಾಡಿದನು.

ಇನ್ನೊಂದು ಉದಾಹರಣೆ 26 ಅಧ್ಯಾಯದಲ್ಲಿ, ಸೌಲನು ದಾವಿದನನ್ನು ಹತ್ತಿರದಿಂದ ಹಿಂಬಾಲಿಸುತ್ತಿರುವಾಗ, ದಾವಿದನು ಸೌಲನನ್ನು ಕೊಲ್ಲುವ ಅವಕಾಶವನ್ನು ಹೊಂದಿದ್ದನು. ಆದರೆ ಅಭಿಷಕ್ತನ ಮೇಲೆ ಕೈಹಾಕದಿರಲು ನಿರ್ಧರಿಸಿದನು. ಬದಲಾಗಿ ಹೊರನಡೆಯಲು ನಿರ್ಧರಿಸಿದನು. ಈ ಪರೀಕ್ಷೆಗಳ ಉದ್ದಕ್ಕೂ, ದೇವರು ದಾವಿದನ ಜೀವನದಲ್ಲಿ ನಂಬಿಗಸ್ಥನಾಗಿದ್ದನು. ಸೌಲನು ದಾವಿದನನ್ನು ಕೊಲ್ಲಲು ಎಷ್ಟೇ ತೀವ್ರವಾಗಿ ಪ್ರಯತ್ನಿಸಿದರೂ, ದೇವರು ಅವನನ್ನು ಸತತವಾಗಿ ರಕ್ಷಿಸಿದನು. 1 ಸಾಮ್ಯುವೇಲ 23:14ರಲ್ಲಿ ಈ ರೀತಿಯಾಗಿ ಉಲ್ಲೇಖಿಸಲಾಗಿದೆ, **ಸೌಲನು ದಿನಂಪ್ರತಿಯೂ ಅವನನ್ನು ಹುಡುಕುತ್ತಿದ್ದರೂ ದೇವರು ಇವನ ಕೈಗೆ ಒಪ್ಪಿಸಲಿಲ್ಲ.**

ಏನೇ ಹಾಗಲಿ, ದಾವಿದನ ಜೀವಿತದ ಒಂದು ಸಮಯವು ಬರುತ್ತದೆ. ನಮ್ಮ ಜೀವಿತಗಳಲ್ಲಿ ಕೂಡ, ನಾವು ದೇವರನ್ನು ಪ್ರೀತಿಸುವಾಗ, ದೇವರ ಮೇಲೆ ಭರವಸೆ ಮತ್ತು ನಮಗೆ ಗೊತ್ತು. ಆತನು ನಮ್ಮನ್ನು ಪ್ರೀತಿ ಮಾಡುತ್ತಾನೆ ಮತ್ತು ನಮ್ಮ ಕಾಳಜಿ ವಹಿಸುತ್ತಾನೆ. ನಾವು ಯೋಚಿಸುವುದಕ್ಕಿಂತಲೂ ಮತ್ತು ಬೇಡುವುದಕ್ಕಿಂತಲೂ ಹೆಚ್ಚಾಗಿ ಕೊಡುವಾತನು ಆಗಿದ್ದಾನೆ. ಆದಾಗ್ಯೂ, ಅನುಮಾನಗಳು ಒಳ ಹೋಗುತ್ತವೆ. ಕಳಪೆ ನಿರ್ಧಾರಗಳನ್ನು ತೆಗೆದುಕೊಳ್ಳಲು ನಮಗೆ ಕಾರಣವಾಗುತ್ತದೆ.

1 ಸಮುವೇಲ 27 ದಾವಿದನ ಜೀವಿತದಲ್ಲಿ ಒಂದು ಜಿಜ್ಞಾಸೆಯ ಅಧ್ಯಾಯವನ್ನು ಚಿತ್ರಿಸುತ್ತದೆ. ಅವನ ಅತ್ಯಂತ ಕಡಿಮೆ ಅಂಶಗಳಲ್ಲಿ ಒಂದನ್ನು ಗುರುತಿಸುತ್ತದೆ.

ಅಂಗ್ಲಭಾಷೆಯ ಸತ್ಯವೇದದಲ್ಲಿ, ಒಂದು ಶಬ್ದವು ಈ ರೀತಿಯಾಗಿ ಪ್ರಾರಂಭವಾಗುತ್ತದೆ. ಆಮೇಲೆ ದಾವಿದನು ಆಲೋಚನೆ ಮಾಡಿದನು. ಅವನಲ್ಲಿ ತಕ್ಷಣವೇ ಸೌಲನು ಅವನನ್ನು ಆಕ್ರಮಣ ಮಾಡುವನು ಎಂಬ ಭಯ ಬರುತ್ತದೆ. ಇನ್ನು ಮೇಲೆ ಯಾವ ಕಾರಣಕ್ಕೂ ನಾನು ಸೌಲನ ವಿರೋಧವಾಗಿ ನಿಲ್ಲಲ್ಲು ಅಗುವುದಿಲ್ಲ ಎಂಬ ಭರವಸೆ. ಅದರ ಪರಿಣಾಮವಾಗಿ, ಆತನು ತನ್ನ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕ್ರಮ ತೆಗೆದು ಕೊಳ್ಳಬೇಕೆಂದು ಆತನು ನಿರ್ಧರಿಸಿದನು. ಅವರ ಜೊತೆಯಲ್ಲಿ. ಫಿಲಿಷ್ಟಿಯರಲ್ಲಿ ಸುರಕ್ಷತೆಯನ್ನು ಹುಡುಕುವುದಕ್ಕಾಗಿ ದಾವಿದನು ಆರಿಸಿಕೊಂಡನು. ಅವನು ಕರ್ತನ ಕೈಯಲ್ಲಿರುವುದಕ್ಕಿಂತ ಹೆಚ್ಚಾಗಿ ಶತ್ರುಗಳ ಕೈಯಲ್ಲಿ ಸುರಕ್ಷಿತವಾಗಿರುತ್ತಾನೆ ಎಂದು ತಪ್ಪಾಗಿ ಭಾವಿಸಿದನು.

ಈ ಒಂದು ಸಮಯದಲ್ಲಿ, ದಾವಿದನು ಪ್ರಪಂಚದ ಸಫಲತೆಯನ್ನು ಅನುಭವಿಸಿರುವುದನ್ನು ನಾವು ನೋಡುತ್ತೇವೆ. ಎಲ್ಲಿ ಎಲ್ಲಿ ಅತನು ಹೋದಾನೋ, ಆತನು ವಿಜಯಭರಿತನಾದನು, ಸಂಪತ್ತನ್ನು ಗಳಿಸಿಕೊಂಡನು. ಹೆಸರು, ಶಕ್ತಿ ಮತ್ತು ಅಧಿಕಾರ. ಆತನಿಗೆ ಬೇಕಾದ ಎಲ್ಲವನ್ನೂ ಹೊಂದಿದ್ದನು ಮತ್ತು ವಿಜಯಶಾಲಿಯಾಗಿದ್ದನು.

ಅದಾಗ್ಯೂ, ನಾವು ಸಾಮಾನ್ಯವಾಗಿ ಯಶಸ್ಸು ಮತ್ತು ಆಶೀರ್ವಾದಗಳನ್ನು ದೇವರಿಂದ ದೈವಿಕ ಕೊಡುಗೆಗಳೆಂದು ಗೊಂದಲಗೊಳಿಸುತ್ತೇವೆ. ಸೈತಾನನು ಸಹ ನಮಗೆ ಸಂಪತ್ತು, ಖ್ಯಾತಿ ಮತ್ತು ಸಮೃದ್ಧಿಯನ್ನು ನೀಡಬಲ್ಲನು. ನಮ್ಮ ಆಶೀರ್ವಾದಗಳು ದೇವರಿಂದ ಬಂದಿವೆಯೋ ಅಥವಾ ಶತ್ರುವಿನಿಂದ ಬಂದಿವೆಯೋ ಎಂಬುದನ್ನು ವಿವೇಚಿಸುವುದು ಬಹಳ ಮುಖ್ಯ. ಆಶೀರ್ವಾದವು ನಮ್ಮನ್ನು ದೇವರಿಂದ ದೂರವಿರಿಸುವುದಾದರೆ, ಕೆಲಸವಾಗಿರಬಹುದು ಅಥವಾ ಸಭೆಗೆ ಹೋಗುವುದನ್ನು ತಡೆಯುವ ಶಿಕ್ಷಣ ಅಥವಾ ಆತನೊಂದಿಗೆ ನಮ್ಮ ಸಂಬಂಧವನ್ನು ಆಳವಾಗಿಸುವುದು ನಮ್ಮ ಆದ್ಯತೆಗಳನ್ನು ಮರು ಮೌಲ್ಯಮಾಪನ ಮಾಡುವ ಸಮಯವಾಗಿದೆ. ನಾವು ಆನಂದಿಸುವ ವಿಷಯವು ನಿಜವಾಗಿಯೂ ದೇವರಿಂದ ಹುಟ್ಟಿಕೊಂಡಿದೆಯೇ ಎಂದು ನಾವು ಯೋಚಿಸಬೇಕು.

ದಾವಿದನು ಸಂತೋಷ ಮತ್ತು ಸಂತೃಪ್ತಿಯಾಗಿದ್ದನು. ಅವನು ಮಾಡಿದ ಎಲ್ಲಾ ನಿರ್ದಯ ಕೊಲೆಗಳು ದೇವರನ್ನು ಮೆಚ್ಚಿಸುತ್ತದೆ ಮತ್ತು ಅವನ ಕಾರ್ಯಗಳು ಸಮರ್ಥವಾಗಿವೆ ಎಂದು ನಂಬಿದನು. ಆಶ್ಚರ್ಯವಾಗಿ, ಆ ಒಂದು ಸಮಯಗಳಲ್ಲಿ, ದಾವಿದನು ಯಾವುದೇ ಕೀರ್ತನೆಗಳನ್ನು ಬರೆಯಲಿಲ್ಲ ಎಂದು ನಾವು ನೋಡುತ್ತೇವೆ. ಇದು ಅವನನ್ನು ಹಿಂಜರಿಕೆಯಿಲ್ಲದೆ ಕೊಲ್ಲಲು ಅನುಮತಿಸುವ ಮನಸ್ಥಿತಿಗೆ ಅಡಿಪಾಯ ಹಾಕಿತು ಎಂದು ನಾನು ನಂಬುತ್ತೇನೆ. ಸತ್ಯವೇದವು ಉಲ್ಲೇಖಿಸುತ್ತದೆ. ದಾವಿದನು ಸ್ತ್ರೀ-ಪುರುಷರಲ್ಲಿ ಒಬ್ಬರನ್ನೂ ಉಳಿಸದೆ ದೇಶದ ಎಲ್ಲಾ ನಿವಾಸಿಗಳನ್ನು ಕೊಂದು ಕುರಿ, ದನ, ಕತ್ತೆ, ಒಂಟೆ, ಉಡುಗೊರೆ ಇವುಗಳನ್ನು ತೆಗೆದುಕೊಂಡು ಅಕೀಷನ ಬಳಿಗೆ ಹೋಗುತ್ತಿದ್ದನು (1 ಸಾಮ್ಯುವೇಲ 27:9).

ಈ ನಡವಳಿಕೆಯು ಅವನನ್ನು ತಣ್ಣನೆಯ ರಕ್ತದ ಕೊಲೆಗಾರನನ್ನಾಗಿ ಪರಿವರ್ತಿಸಿತು. ಅವನ ಸ್ವಂತ ಮರಣದಂಡನೆಯನ್ನು ಅವನಿಗೆ ವಹಿಸಿಕೊಡುವ ಮೂಲಕ ಬತ್ಶೇಬ ಪತಿಯಾದ ಉರಿಯನ

*(8ನೇ ಪುಟಕ್ಕೆ)*

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Great Commission Partners (Network of Pastors)
7. Training Programmes – Seminars & Retreats
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
13. **Early Morning Service : 5.30 a.m. Sunday**
14. **Preliminy Service : 8.00 a.m. Sunday**
15. **Tamil Service : 8.30 a.m. Sunday**
16. **Youth Meeting : 11.00 a.m. Sunday**
17. **Fellowship Lunch : 1.00 p.m. Sunday**
18. **Hindi Service : 4.00 p.m. Sunday**
19. **Telugu Service : 5.00 p.m. Sunday**
20. **English & Hindi Service : 6.00 p.m. Sunday**
21. Feedback Time : 7.30 p.m. Sunday
22. Women's Prayer : 5.30 p.m. Wednesday
23. Men's Prayer : 7.00 p.m. Friday
24. Discipleship Meeting : 6.00 p.m. Saturday
25. House Meetings : 6.30 p.m. Tuesday & Thursday
26. Special Holy Communion : 6.00 a.m. 1st day of each month
27. Ministers' Meeting : 6.00 p.m. First Saturday
28. Parents' Prayer : 4.00 p.m. First Sunday
29. Night Prayer : 9.30 p.m. Third Friday
30. Fasting Prayer : 9:30 a.m. Second Saturday
31. Holy Communion : Second Sunday Services
32. Youth / Kid Prayer : 10.00 p.m. daily (over phone)
33. Staff Devotion : 9.00 a.m. daily
34. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
Echo of His Call, **Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

**WANTED**

# PRINCIPAL

**for**

**CHRISTIAN MATRICULATION SCHOOL at Chennai.**

We need well qualified, experienced, dedicated, hard working and mission oriented Christian.

Apply to :
E.mail: biblecor@yahoo.co.in
WhatsApp: (+91) 97908 05460

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)

## ಅದ್ಭುತವಾದದ್ದು ಆದರೆ ಸತ್ಯ!

ಒಂದು ಸಾರಿ ನನ್ನ ಮಗ ಅಲೆಕ್ಸ್ ಸ್ಯಾಮುಸನ್ ಮತ್ತು ನಾನು ಒಂದು ಹೊರಗಿನ ದೇಶದಲ್ಲಿ ದೇವರ ವಾಕ್ಯವನ್ನು ಸಾರುವದಕ್ಕೆ ಆಹ್ವಾನವಿತ್ತು. ನಮಗೆ ಆಹ್ವಾನ ಕೊಟ್ಟ ಸಹೋದರನು ನಮ್ಮ ಎಲ್ಲಾ ಸಾರಿಗೆ ವೆಚ್ಚವನ್ನು ಭರಿಸುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ಈ ಒಂದು ದೇಶಕ್ಕೆ ಕರ್ತನು ನಮ್ಮನ್ನು ನಡೆಸಿದನು ಮತ್ತು ಸೇವೆಯು ಅಸಾಧಾರಣವಾಗಿ ಚೆನ್ನಾಗಿ ನಡೆಯಿತು. ಕರ್ತನು ಶಕ್ತಿಯುತವಾಗಿ ಕಾರ್ಯ ಮಾಡಿದನು ಮತ್ತು ಅನೇಕ ಆತ್ಮಗಳನ್ನು ತನಗಾಗಿ ಆರಿಸಿಕೊಂಡನು.

ಸೇವೆಯ ದಿನಗಳು ಮುಗಿದಾಗ, ನಾವು ಅಲ್ಲಿಂದ ಬಿಡುವುದಕ್ಕೆ ಸಿದ್ಧರಾಗುತ್ತ ಇದ್ದೆವು. ಏನೇ ಆಗಲಿ, ನಮ್ಮ ಸಾರಿಗೆ ವೆಚ್ಚಗಳನ್ನು ಭರಿಸುವುದಕ್ಕೆ ನಮ್ಮನ್ನು ಆಹ್ವಾನ ಮಾಡಿದ ಸಹೋದರನು ನೆರವೇರಿಸುವುದಕ್ಕೆ ಅಶಕ್ತನಾದನು. ಈ ಅನಿರೀಕ್ಷಿತ ತಿರುವು ನಮ್ಮ ಮುಂದಿನ ಪ್ರಯಾಣಕ್ಕೆ ಸವಾಲಿನ ಆರ್ಥಿಕ ಪರಿಸ್ಥಿತಿಯನ್ನು ಸೃಷ್ಟಿಸಿತು. ಆದರೂ, ಈ ಘಟನೆಯು ನಮ್ಮ ಶಾಂತಿಯನ್ನು ಕದಡಲಿಲ್ಲ ಎಂಬುದು ಗಮನಾರ್ಹವಾಗಿದೆ. ದೇವರ ವಾಕ್ಯವು ನಮಗೆ ಜ್ಞಾಪಕಪಡಿಸಿದ ಹಾಗೆ, ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟ ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತಿದೆ. ಈ ವಚನವು ನಮಗೆ ಸಾಂತ್ವನವನ್ನು ತಂದಿತು.

ನಾವು ಮುಂದಿನ ನಗರಕ್ಕೆ ವಿಮಾನ ಟಿಕೆಟ್ ಗಳನ್ನು ಖರೀದಿಸಿದ್ದೆವು. ಆಹಾರಕ್ಕಾಗಿ ಹಣವಿಲ್ಲ ವೆಂದು ನಮಗೆ ಗೊತ್ತಾಯಿತು. ಟಿಕೆಟ್ ದರವು ಬಹಳ ದುಬಾರಿಯಾಗಿತ್ತು. ಪರಿಣಾಮವಾಗಿ, ವಿಮಾನಯಾನ ಸಂಸ್ಥೆಯು ಪಾವತಿಯಿಲ್ಲದೆ ನೀರನ್ನು ಸಹ ಒದಗಿಸುವುದಿಲ್ಲ. ವಿಮಾನವು ತನ್ನ ಗಮ್ಯಸ್ಥಾನವನ್ನು ತಲುಪುವವರೆಗೆ ನಾವು ಹಸಿವು ಮತ್ತು ಬಾಯಾರಿಕೆಯನ್ನು ಸಹಿಸಿಕೊಂಡೆವು. ಆಶ್ಚರ್ಯವಾಗಿ, ನಾನಾಗಲಿ ಅಥವಾ ನನ್ನ ಮಗನಾಗಲಿ ಈ ವಿಷಯದಲ್ಲಿ ನಾನು ಯಾರೊಂದಿಗೂ ಯಾವುದೇ ಕಹಿ ಭಾವನೆಯನ್ನು ಹೊಂದಲಿಲ್ಲ. ಭರವಸೆ ನೀಡಿದ ಹಣವನ್ನು ಒದಗಿಸಲು ಸೋತಿದ್ದಕ್ಕಾಗಿ ನಾವು ಎಂದಿಗೂ

## ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ (1 ಸಾಮ್ಯುವೇಲ 16:7).

ಸಹೋದರನನ್ನು ದೂಷಿಸಲಿಲ್ಲ. ನಾವಿಬ್ಬರು ಈ ವಿಷಯದಲ್ಲಿ ಶಾಂತವಾಗಿ ಇದ್ದೆವು ಮತ್ತು ಹೃದಯದಲ್ಲಿ ನಾವು ಕಳವಳಗೊಳ್ಳಲಿಲ್ಲ. ದೇವರಿಗೆ ಮಹಿಮೆಯುಂಟಾಗಲಿ!

ಮುಂದಿನ ನಗರಕ್ಕೆ ಮುಟ್ಟಿದಾಗ, ದೇವರ ಮಕ್ಕಳಿಂದ ನಮಗೆ ಹಾರ್ದಿಕ ಸ್ವಾಗತ ಸಿಕ್ಕಿತು. ನಮ್ಮ ವಿಶ್ರಾಂತಿ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋದರು. ನಮ್ಮ ಅಸಾಧಾರಣವಾಗಿ ನಮಗೆ ಕಾಳಜಿಯನ್ನು ತೆಗೆದುಕೊಂಡರು.

ಮರುದಿನ, ಒಬ್ಬ ಸಹೋದರ ನಮ್ಮನ್ನು ಭೇಟಿಯಾಗಲಿಕ್ಕೆ ಬಂದನು. ಆತನು ನಮ್ಮ ಸಂಗಡ ಸ್ವಲ್ಪಹೊತ್ತು ಮಾತನಾಡಿ ನಮ್ಮ ಕೈಯಲ್ಲಿ ಒಂದು ಲಕೋಟೆಯನ್ನು ಕೊಟ್ಟನು. **"ಸಭಾ ಪಾಲಕರೇ, ನಿಮ್ಮ ತುರ್ತು ವೆಚ್ಚಕ್ಕಾಗಿ ಇದನ್ನು ನೀಡುವಂತೆ ದೇವರು ನನಗೆ ಸೂಚಿಸಿದ್ದಾನೆ"** ಎಂದು ಹೇಳಿದನು. ಲಕೋಟೆಯೊಳಗೆ ನಮ್ಮ ಪ್ರಯಾಣದ ವೆಚ್ಚವನ್ನು ಮೀರಿದ ಹಣವಿತ್ತು. ಇದನ್ನು ನೋಡಿ ನಮಗೆ ಬಹಳ ಸಂತೋಷವಾಯಿತು. ಆ ಒಂದು ಸಹೋದರ ಮತ್ತು ಆತನ ಸಭೆಯು ನಮಗೆ ಒಳ್ಳೆಯ ಸ್ನೇಹಿತರಾದೆವು. ಎಂತಹ ಅದ್ಭುತವಾದ ಆಶ್ಚರ್ಯ! ನಮಗೆ ಯಾವುದೇ ಕೊರತೆಯಾಗಲಿಲ್ಲ. ಅಂದಿನಿಂದ ದೇವರು ನಮಗೆ ಈ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿದ್ದಾನೆ.

ಪ್ರೀತಿಯ ಓದುಗರೇ, ಈ ಕರ್ತನ ಸೇವೆ ಮಾಡುವುದಕ್ಕೆ ನೀವು ಆರಿಸಿಕೊಳ್ಳುವಿರಾ? **ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು; ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ ಕೀರ್ತನೆ 34:10. ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ; ಆತನನ್ನು ಆಶ್ರಯಿಸಿ ಕೊಂಡವರು ಎಷ್ಟೋ ಧನ್ಯರು** ಕೀರ್ತನೆ 34:8.

★ ★ ★

*(6ನೇ ಪುಟದಿಂದ)*

ಮರಣವನ್ನು ವಾದ್ಯವೃಂದವನ್ನು ಮಾಡಲು ಅವನಿಗೆ ಸುಲಭವಾಯಿತು. ದಾವಿದನು ತನ್ನ ಕಾರ್ಯಗಳಿಗೆ ಯಾವುದೇ ಪಶ್ಚಾತ್ತಾಪವನ್ನು ತೋರಿಸಲಿಲ್ಲ. ಯಾಕೆಂದರೆ ಈ ಮನಸ್ಥಿತಿಯ ಬೀಜಗಳು ಫಿಲಿಸ್ಟೈನ್ ಪ್ರಾಂತ್ಯದಲ್ಲಿ ಬಹಳ ಹಿಂದೆಯೇ ನೆಡಲ್ಪಟ್ಟವು. ದೇವರ ಚಿತ್ತ ಮತ್ತು ಉಪಸ್ಥಿತಿಯಿಂದ ದೂರವಿತ್ತು.

ಅವನು ಇಸ್ರಾಯೇಲ್ಯರ ಮತ್ತು ಸೌಲನ ವಿರುದ್ಧ ಹೋರಾಡುವವರೆಗೂ ಹೋದನು. 29ನೇ ಅಧ್ಯಾಯದಲ್ಲಿ ನಾವು ನೋಡುತ್ತೇವೆ ಫಿಲಿಸ್ಟೈನ್ ಸೈನ್ಯದ ನಾಯಕನು ಈ ರೀತಿಯಾಗಿ ಹೇಳುತ್ತಾನೆ. ಈ ಮನುಷ್ಯನನ್ನು ಕಳುಹಿಸಿಬಿಡು. ಇವನು ಹಿಂತಿರುಗಿ ಹೋಗಿ ನೀನು ನೇಮಿಸಿದ ಸ್ಥಳದಲ್ಲೇ ವಾಸಿಸಲಿ; ನಮ್ಮ ಜೊತೆಯಲ್ಲಿ ಯುದ್ಧಕ್ಕೆ ಬರಬಾರದು. ಬಂದರೆ ನಮಗೆ ಶತ್ರುವಾಗಿ ನಿಂತಾನು. ಅಂತಿಮವಾಗಿ ದಾವಿದನನ್ನು ಅವರು ನಿಲ್ಲಿಸಿದರು.

ಒಮ್ಮೆ ಒಬ್ಬರು ದೇವರಿಂದ ಹಿಂದೆ ಸರಿಯುವ ಇಳಿಜಾರಿನ ಕೆಳಗೆ ಬರಲು ಪ್ರಾರಂಭಿಸಿದರೆ ಅದು ಕಡಿದಾದ ಅವನತಿ ಯಾಗುತ್ತದೆ. ದಾವಿದನು ವೇಗವಾಗಿ ಇಳಿದನು. ಅವನ ಕ್ರಿಯೆಗಳ ಪರಿಣಾಮವು ಆಗಾಧವಾಗಿದೆ:

ಅವನು ಹಿಂತಿರುಗಿದಾಗ, ತಾನು ಸಂಪಾದಿಸಿದ್ದೆಲ್ಲವೂ ಹೋಗಿರುವುದನ್ನು ಕಂಡು ಅಘಾತಗೊಂಡನು.

1 ಸಾಮ್ಯುವೇಲ 30:1-2 **ದಾವೀದನೂ ಅವನ ಜನರೂ ಮೂರನೆಯ ದಿನ ಜಿಕ್ಲಗ್ ಊರನ್ನು ಮುಟ್ಟಿದರು. ಅಷ್ಟರೊಳಗೆ ಅಮಾಲೇಕ್ಯರು ದಂಡೆತ್ತಿ ದಕ್ಷಿಣ ಪ್ರಾಂತಕ್ಕೂ ಜಿಕ್ಲಗ್ ಊರಿಗೂ ಬಂದು ಜಿಕ್ಲಗ್ ಊರನ್ನು ಸುಟ್ಟು ಹಾಳು ಮಾಡಿ ಅದರಲ್ಲಿದ್ದ ಎಲ್ಲಾ ಹೆಂಗಸರನ್ನೂ ಚಿಕ್ಕವರನ್ನೂ ದೊಡ್ಡವರನ್ನೂ ಸೆರೆಹಿಡಿದುಕೊಂಡು ಹೋಗಿದ್ದರು. ಆದರೆ ಯಾರನ್ನೂ ಕೊಂದಿರಲಿಲ್ಲ.**

ದಾವೀದನು ಎಲ್ಲವನ್ನೂ ಕಳೆದುಕೊಂಡನು. ತನ್ನ ಹೆಂಡತಿಯನ್ನು ಒಳಗೊಂಡು ಮತ್ತು ಅವನ ಜನರ ದೃಢವಾದ ನಿಷ್ಠೆ, ಅವನು ಎಲ್ಲೆಡೆ ಅವನೊಂದಿಗೆ ಮತ್ತು ಅವನ ಎಲ್ಲಾ ಯುದ್ಧಗಳಲ್ಲಿ ಹೋರಾಡಿದನು.

1 ಸಾಮ್ಯುವೇಲ 30:6 ಉಲ್ಲೇಖಿಸುತ್ತದೆ. **ಇದಲ್ಲದೆ ಜನರು ತಮ್ಮ ಗಂಡು ಹೆಣ್ಣು ಮಕ್ಕಳಿಗಾಗಿ ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡು ದಾವೀದನನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರಿಂದ ಅವನು ಬಲು ಇಕ್ಕಟ್ಟಿನಲ್ಲಿ ಬಿದ್ದನು.**

ದಾವಿದನು ಸಂಪೂರ್ಣವಾಗಿ ಪ್ರತ್ಯೇಕವಾಗಿ ಭಾವಿಸಿಕೊಂಡನು. ಪ್ರತಿಯೊಬ್ಬನು ಅವನಿಗೆ ವಿರೋಧವಾಗಿ ಇದ್ದಾರೆ ಎಂದು ಅಂದುಕೊಂಡನು. ಆತನು ತನ್ನ ಕುಟುಂಬ, ತನ್ನ ಕೆಲಸ, ಉಳಿತಾಯ, ಆತನ ಪ್ರಖ್ಯಾತಿ-ಎಲ್ಲೂ ಒಂದೇ ಒಂದು ರಾತ್ರಿ ಹೋಯಿತು. ಆತನ ಸ್ವಂತ ಜನರು ಆಕ್ರಮಣ ಮಾಡುವುದಕ್ಕೆ ಸಿದ್ಧರಾದರು ಮತ್ತು ಅವನನ್ನು ಕೊಲ್ಲುವುದಕ್ಕೂ ಕೂಡ, ಆತನಿಗೆ ಭರವಸೆ ಇಡುವುದಕ್ಕೆ ಯಾರು ಇರಲಿಲ್ಲ. ತನ್ನ ಸಮಸ್ಯೆಗಳನ್ನು ಹಂಚಿಕೊಳ್ಳುವುದಕ್ಕೆ ಯಾರೂ ಇಲ್ಲ. ಆತನ ಮನೋಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ.

ಒಬ್ಬ ನಾಯಕನಾಗಿ ಏಕಾಂಗಿತನವನ್ನು ಅನೇಕ ಸಾರಿ ಅನುಭವಿಸಬೇಕು. ಸನ್ನಿವೇಶಗಳನ್ನು ಸುಲಭವಾಗಿರುವಾಗ, ನಾಯಕರು ಪ್ರಶಂಸೆಯನ್ನು ಸ್ವೀಕರಿಸುತ್ತಾರೆ. ಏನೇ ಆಗಲಿ, ವಿಷಯಗಳು ಹದಗೆಟ್ಟಾಗ ಅವರು ತಮ್ಮ ಆಂತರಿಕ ಭಾವನೆಗಳನ್ನು ವ್ಯಕ್ತಪಡಿಸಲು ಸಾಮಾನ್ಯವಾಗಿ ಯಾರು ಇರುವುದಿಲ್ಲ. ಬೇರೆಯವರ ಹಾಗೆ, ದಾವಿದನು ಎಲ್ಲವನ್ನು ಕಳೆದುಕೊಂಡನು. ಆದರೂ ಅವನ ಹತಾಶೆಯನ್ನು ಹೊರಹಾಕಲು ಅಥವಾ ಅವನ ದುಃಖವನ್ನು ಹೊರಹಾಕಲು ಅವನಿಗೆ ಸ್ಥಳವಿರಲಿಲ್ಲ. ಅವನ ಮಾನಸಿಕ ಸ್ಥಿತಿಯನ್ನು ನೀವು ಊಹಿಸಬಹುದೇ?

ಅನೇಕ ಸಾರಿ, ದೇವರಿಂದ ದೂರವಿರುವುದು ಉತ್ತಮ ಎಂದು ನಾವು ನಂಬುತ್ತೇವೆ. ಏನೇ ಆಗಲಿ, ದೇವರು ಆಗಾಗ್ಗೆ ನಮಗೆ ಉದ್ದವಾದ ಹಗ್ಗವನ್ನು ನೀಡುತ್ತಾನೆ. ಯಾಕೆಂದರೆ ಆತನ ಪ್ರೀತಿಯು ಆಳವಾದ ಮತ್ತು ಅಗ್ರಾಹ್ಯವಾಗಿದೆ. ಇದು ನಮ್ಮ ಪಾಪಗಳನ್ನು ಮತ್ತು ಅಸಹಕಾರವನ್ನು ಮೀರಿಸುತ್ತದೆ. ಅದಕ್ಕಾಗಿಯೇ ಆತನು ಪರಲೋಕವನ್ನು ತೊರೆದು ಮತ್ತು ನಮಗೆ ನಿತ್ಯಜೀವವನ್ನು ನೀಡಲು ಸರಳ ಮನುಷ್ಯನ ರೂಪವನ್ನು ಪಡೆದನು.

**ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವುದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು** -ಫಿಲಿಪ್ಪಿ 2:6-8. ಎನ್‌ಎಲ್‌ಟಿ

ಆತನು ಜೀವವನ್ನು ತರುವುದಕ್ಕಾಗಿ ಶಿಲುಬೆಯಲ್ಲಿ ಸತ್ತನು. ನಮ್ಮ ಅಸ್ತಿತ್ವಕ್ಕೆ ಅರ್ಥ, ನಮ್ಮ ಜೀವಿತಗಳಿಗೆ ಉದ್ದೇಶವನ್ನು ಒದಗಿಸುವುದಕ್ಕಾಗಿ, ನಮಗೆ ಬಹುಮಾನವನ್ನು ಕೊಡುವುದಕ್ಕಾಗಿ ತಿರುಗಿ ಬರುತ್ತಾನೆ. ನಾವು ಆತನನ್ನು ಪ್ರೀತಿಸಬೇಕು ಮತ್ತು ಆತನೊಂದಿಗೆ ಆತ್ಮೀಯ ನಡಿಗೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬುದು ಆತನ ಅಪೇಕ್ಷೆ.

ದಾವಿದನು ಕರ್ತನಲ್ಲಿ ಶಕ್ತಿಯನ್ನು ಪಡೆದುಕೊಂಡನು!

ದಾವಿದನು ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡನು ಎಂದು ಸತ್ಯವೇದವು ಉಲ್ಲೇಖಿಸುತ್ತದೆ. ಏನೇ ಆಗಲಿ, ಕರ್ತನಲ್ಲಿ ತನ್ನನ್ನು ತಾನು ಬಲಪಡಿಸಿಕೊಂಡನು ಎಂದು ಹೇಳುತ್ತದೆ. ಓಹೋ! ಅಂತಿಮವಾಗಿ, ಅವನು ದೇವರಿಂದ ಎಷ್ಟು ದೂರ ಹೋಗಿದ್ದಾನೆಂದು ಅರಿತುಕೊಂಡನು. ಅವನು ಬಲದಲ್ಲಿ ಉಜ್ಜೀವನವಾಗಲು ದೇವರ ಬಳಿಗೆ ಹಿಂದಿರುಗಿದನು. ದಾವೀದನು ದೇವರು ಆವನ ಏಕೈಕ ಶಕ್ತಿಯ ಮೂಲ ಎಂದು ಕಂಡುಹಿಡಿದನು. ಅವನ ಹತಾಶೆಯ ಪರಿಸ್ಥಿತಿಯಲ್ಲಿ ಅವನಿಗೆ ಸಹಾಯ ಮಾಡುವ ಸಾಮರ್ಥ್ಯವಿದೆ. ಆತನು ಕಷ್ಟದ ಸಮಯದಲ್ಲಿ ಯಾವಾಗಲೂ ಪ್ರಸ್ತುತ ಸಹಾಯ ಎಂದು ಅವನು ಅರ್ಥಮಾಡಿಕೊಂಡನು. ದಾವೀದನು ದೇವರ ಪ್ರಸನ್ನತೆಯನ್ನು ಹುಡುಕಿದನು. ಮುಂದೆ ಏನು ಮಾಡಬೇಕೆಂದು ಕೇಳಿದನು. ಮಾರ್ಗದರ್ಶನಕ್ಕಾಗಿ ಆತನ ಮುಖವನ್ನು ಹುಡುಕುವುದು. ಸರ್ವಶಕ್ತನ ಮೇಲೆ ಆತನ ಅವಲಂಬನೆಯನ್ನು ಪ್ರದರ್ಶಿಸುತ್ತಾನೆ. ಈ ಸಮಯದಲ್ಲಿ ಆತನು ಕರ್ತನ ಶಕ್ತಿಯಿಂದ ಮುಂದೆ ಹೋಗಲು ಬಯಸಿದನು.

ನಮ್ಮಲ್ಲಿ ಕೆಲವರನ್ನು ದೇವರು ಶಕ್ತಿಗಾಗಿ, ಪ್ರೋತ್ಸಾಹಕ್ಕಾಗಿ, ಕ್ಷಮಾಪಣೆಗಾಗಿ ಮತ್ತು ಪುನಃಸ್ಥಾಪನೆಗಾಗಿ ಕರೆಯುತ್ತಾ ಇದ್ದಾನೆ. ನಾವು ಇರಬೇಕಾದ ಸ್ಥಳಕ್ಕೆ ಹಿಂತಿರುಗಲು. ದೇವರಲ್ಲಿ ಕೈಯಲ್ಲಿ ಬೀಳುವುದಕ್ಕೆ ದಾವೀದನು ಅನುಮಾನಪಡಲಿಲ್ಲ. ಅದೇ ತರಹ ಮಾಡುವುದಕ್ಕೆ ನಾವು ನಾಚಿಕೊಳ್ಳಬಾರದು.

ಸತ್ಯವೇದವು ನಮಗೆ ಹೇಳುತ್ತದೆ ದಾವಿದನು ದೇವರ ಬಳಿಗೆ ಹಿಂತಿರುಗಿ ಬಂದಾಗ (1 ಸಮುವೇಲ 30:18) **ದಾವೀದನು ಎಲ್ಲವನ್ನು ತಿರುಗಿ ಪಡೆದುಕೊಂಡನು.** ಆತನು ಕಳೆದುಕೊಂಡದ್ದನ್ನು ಎಲ್ಲವನ್ನು ತಿರುಗಿ ಪಡೆದುಕೊಂಡನು. ಕುಟುಂಬ, ಹಣ, ಹೆಸರು, ಅಂತಸ್ತು, ಸ್ನೇಹಿತರು, ಆಸ್ತಿ. ಆಲೋಚನೆ ಮಾಡಿಕೊಳ್ಳಿರಿ. ದಾವಿದ ಬಹುಶಃ ನೀವು ದಾವೀದನ ಪರಿಸ್ಥಿತಿಯಲ್ಲಿ ನಿಮ್ಮನ್ನು ನೋಡುತ್ತೀರಿ. ನೀವು ಎಲ್ಲವನ್ನು ಕಳೆದುಕೊಂಡಿರುವಂತೆ ಭಾವಿಸುತ್ತೀರಿ ಮತ್ತು ಚೇತರಿಕೆ ಸಾಧ್ಯವೇ ಎಂದು ಆಶ್ಚರ್ಯಪಡುತ್ತೀರಿ. ಯೋಚಿಸಿರಿ, ದಾರಿ ಇದೆಯೇ? ನಾನು ಇದರಲ್ಲಿ ಒಬ್ಬಂಟಿಯಾಗಿದ್ದೇನೆ.

ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ನಾವು ಏಕಾಂಗಿಯಲ್ಲ ಎಂಬುದನ್ನು ಜ್ಞಾಪಕವಿಟ್ಟುಕೊಳ್ಳಬೇಕು. ನಾವು ತಂದೆಯ ಬಳಿಗೆ ಹೋಗಬೇಕು. ಆತನು ನಮ್ಮ ಒಳಿತಿಗಾಗಿ ಎಲ್ಲವನ್ನೂ ಸುಂದರವಾಗಿ ಮಾಡುತ್ತಾನೆ.

ಪ್ರಿಯ ಸ್ನೇಹಿತರೇ, ದಾವಿದನ ಜೀವನದಲ್ಲಿ ಕಡಿದಾದ ಅವನತಿಯು ಅವನ ಆಲೋಚನೆಗಳಿಂದ ಆವಿಯಾಯಿತು. ಆದ್ದರಿಂದ ನಾವು ಏನು ಯೋಚಿಸುತ್ತೇವೆ ಎಂಬುದರ ಬಗ್ಗೆ ನಾವು ಜಾಗರೂಕರಾಗಿರೋಣ. ಅದೇ ಸಮಯದಲ್ಲಿ, ನಮ್ಮ ದೇವರು ದಯೆಯುಳ್ಳ ತಂದೆ ಎಂದು ನಾವು ಜ್ಞಾಪಕವಿಟ್ಟುಕೊಳ್ಳಬೇಕು. ನಮಗಾಗಿ ಆತನು ಕಾಯುತ್ತಾ ಇದ್ದಾನೆ ಮತ್ತು ನಾನು ಆತನ ಬಳಿಗೆ ಮರಳಲು, ಶಾಶ್ವತವಾದ ತೆರೆದ ಕೈಗಳೊಂದಿಗೆ.

ನೀವು ಆತನಿಗಾಗಿ ಓಡುತ್ತೀರಾ?

★ ★ ★

## Kind Attention!

### PASTOR S. SAM SELVA RAJ'S AUTOBIOGRAPHY!

We are in the final stages of completing the publication of Pastor S. Sam Selva Raj's autobiography in book format. **We request your testimonies, which may be upto ten lines, detailing how God has impacted your spiritual growth through his ministry.** Additionally, we would appreciate it if you could provide a photo for inclusion in the autobiography.

- Editor

RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**
Please subscribe

Kindly view and subscribe our **Echo of His Call YouTube Channel** when you get time. Thanks.
**- Editor**

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**
*****
**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/24-26**
**WPP NO. TN/PMG(CCR)/ WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th OCTOBER 2024.**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**